‘ಸಾರ್ ಜಯಂತ್ ಅವರ ವಿಷಯ ಹೇಳಬೇಕಿತ್ತು’.

‘ಹೇಳಿ ವಿನಯ್…. ಅಲ್ಲೇ ಇದ್ದಾರ ಅವರು?’

‘ಇದ್ದಾರೆ ಸಾರ್…’

‘ಸರಿ, ನೀವೂ ಬನ್ನಿ ನನ್ನ ಜೊತೆನೇ… ದಾರೀಲಿ ಮಾತಾಡೋಣ’.

ಮಾಯಣ್ಣ ಹೊರಗೆ ಬರುವಷ್ಟರಲ್ಲಿ ಯಲಹಂಕ ಲಿಮಿಟ್ಸ್ ಟ್ರಾಫಿಕ್ ಪೀಸಿ ನಿಂಗಯ್ಯ ಬೊಲೆರೋ ಜೀಪ್ ಅನ್ನು ಪೊಲೀಸ್ ಸ್ಟೇಷನ್ ಅಂಗಳದಲ್ಲಿ ತಂದು ನಿಲ್ಲಿಸಿದ್ದ.

‘ಆಯ್ತು ನಿಂಗಯ್ಯ ಅವರೇ… ಥ್ಯಾಂಕ್ಸ್, ನೀವು ಹೊರಡಿ’.

‘ಆಯ್ತು ಸರ್…’

ಮಾಯಣ್ಣ ಮತ್ತೆ ಒಳಗೆ ಬಂದು ‘ರೀ ಕುಮಾರ್, ಈ ಇಬ್ಬರನ್ನು ರಂಗಯ್ಯನಿಂದ ದೂರ ಇಡಿ… ಪೊಲೀಸ್ ಕಸ್ಟಡಿ ಸಿಕ್ಕ ಮೇಲೆ ಬೇಕಾದರೆ ನೋಡೋಣ’.

‘ಯೆಸ್ ಸಾರ್’.

ರವಿ ಮತ್ತು ವಿನೋದ್ ಕಡೆ ತಿರುಗಿ, ‘ಏನ್ ಗೊತ್ತಾ ರವಿ, ಎಲ್ಲರಿಗೂ ಏನೇನೋ ಕಷ್ಟ ತಾಪತ್ರಯ ಇರುತ್ತೆ, ಅದರಿಂದ ಹಗುರ ಆಗೋದಿಕ್ಕೆ ಒಬ್ಬೊಬ್ಬರು ಒಂದೊಂದು ದಾರಿ ಹುಡುಕಿಕೊಂಡಿರುತ್ತಾರೆ. ಆದರೆ ನಮ್ಮ ಈ ರಂಗಯ್ಯ ಇದ್ದಾರಲ್ಲ, ಇವರಿಗೆ ಜನರನ್ನ ಹಿಡ್ಕೊಂಡು ಮನಸೋ ಇಚ್ಛೆ ಹೊಡುದ್ರೇನೆ ಅವರ ಮನಸ್ಸು ಹಗುರ ಆಗೋದು. ಅವರಿಗೆ ಅದೊಂದು ಥೆರಪಿ, ಅವರ ಮನಸ್ಸಿನ ಚಿಕಿತ್ಸೆಗೆ… ಹೇಗೆ ಪೊಲೀಸ್ ಸ್ಟೇಷನ್‌ನ ದುರುಪಯೋಗಪಡುಸ್ಕೊಳ್ತಾರೆ ನೋಡಿ… ಕುಮಾರ್ ಬೊಲೆರೋ ಜೀಪನ್ನು ಸರಿಯಾಗಿ ಸೀಲ್ ಮಾಡಿ… ಬರ್ತೀನಿ ನಾನು’.

ರವಿ ಮತ್ತು ವಿನೋದ್ ಮನಸ್ಸಿನ ಮೇಲೆ ಮಾಯಣ್ಣ ಆಗಲೇ ದಾಳಿ ಶುರು ಮಾಡಿದ್ದ. ಮಾಯಣ್ಣ ಮತ್ತೆ ಹಿಂದಕ್ಕೆ ತಿರುಗಿ ರವಿಯ ಕಿವಿಯ ಹತ್ತಿರ ಹೋಗಿ ಪಿಸುಮಾತಿನಲ್ಲಿ – ‘ರವಿ, ನಾಳೆ ನಮ್ಮನೇಲಿ ವೆಜಿಟಬಲ್ ಬಾತ್. ಸರಿಯಾಗಿ ಹೇಳು ಯಾವ ತರಕಾರಿ ಹಾಕುದ್ರೆ ಹೆಚ್ಚು ರುಚಿ?’

ರವಿಯ ಹಿಂಜರಿಕೆಯನ್ನು ಗಮನಿಸಿ– ‘ಯಾಕೆ ಅದೇನು ಅಷ್ಟೊಂದು ಸೀಕ್ರೆಟ್ಟಾ… ಹೋಗಲಿ ನನ್ನ ಕಿವೀಲಿ ಹೇಳು’ ಎನ್ನುತ್ತಾ ತನ್ನ ಕಿವಿಯನ್ನು ರವಿಯ ಬಾಯಿಯ ಹತ್ತಿರ ತಂದ. ರವಿ ಹೇಳಿದ ಉತ್ತರಕ್ಕೆ ‘ನನಗೆ ಗೊತ್ತಿತ್ತು, ನೀನು ಒಳ್ಳೆಯ ಬಾಣಸಿಗ ಅಂತ’ ಎಂದ. ಠಾಣೆಯ ಎಲ್ಲರೂ ಏನಿದು ಪ್ರಹಸನ ಎಂದು ನೋಡುತ್ತಿದ್ದರು.

10

ಮಾಯಣ್ಣ ಗಾಯವಾದ ಕೈಗೆ ನಾಲ್ಕು ಸ್ಟಿಚ್ ಹಾಕಿಸಿ, ಬ್ಯಾಂಡೇಜ್ ಪಟ್ಟಿ ಕಟ್ಟಿಸಿ ಆಸ್ಪತ್ರೆಯಿಂದ ಠಾಣೆಗೆ ಬಂದಾಗ ಸಮಯ ಬೆಳಿಗ್ಗೆ ಹನ್ನೊಂದು. ಇಂದು ತಡರಾತ್ರಿಗಾದರೂ ಅಮ್ಮುವನ್ನು ಕೊಲೆ ಮಾಡಿರಬಹುದಾದ ಶಂಕಿತರ ಅಂತಿಮಪಟ್ಟಿಯು ಸಿದ್ಧವಾಗುವ ಸಾಧ್ಯತೆ ಇತ್ತು. ಅದಕ್ಕೆ ಮುಂಚೆ ರವಿ, ಡೈರೆಕ್ಟರ್ ದಿನೇಶ್ ಮತ್ತು ಜಯಂತ್ – ಈ ಮೂವರ ಜೊತೆ ಮಾತು ಮುಗಿಸುವುದು ಬಹಳ ಮುಖ್ಯ ಮತ್ತು ಅನಿವಾರ್ಯವೂ ಆಗಿತ್ತು. ಬೆಳಿಗ್ಗೆ ಮೆಲ್ಲಗೆ ಆರಂಭವಾದ ಹೂಮಳೆ ಈಗ ಎಲ್ಲರನ್ನೂ ಒಳಗೇ ಕಟ್ಟಿಹಾಕುವ ರೇಜಿಗೆ ಬಿದ್ದಂತೆ ಗುಡುಗು ಸಿಡಿಲುಗಳ ಸಮೇತ ‘ಧೋ’ ಎಂದು ಅಪ್ಪಳಿಸುತ್ತಿತ್ತು.

‘ವಿನಯ್, ರವಿ ಮತ್ತು ವಿನೋದ್‌ನ ಬೇರೆ ಮಾಡಿ, ಪ್ರತ್ಯೇಕವಾಗಿ ಮಾತಾಡೋಣ… ವಿನೋದ್‌ಗೆ ಖಡಕ್ಕಾಗಿ ಹೇಳಿ, ಇಬ್ಬರ ಹೇಳಿಕೆಗಳಲ್ಲಿ ಏನಾದರೂ ವ್ಯತ್ಯಾಸ ಕಂಡರೆ, ಯಾರು ಸುಳ್ಳು ಹೇಳಿದ್ದಾರೊ ಅವರ ತಲೆ ಮೇಲೆ ಎಲ್ಲಾ ಕೇಸುಗಳನ್ನು ಸುರಿದು ಅವರನ್ನ ಮುಚ್ಚಾಕಿ ಬಿಡ್ತೀವಿ ಅಂತ’.

‘ಯೆಸ್ ಸಾರ್’.

‘ಈಗ ಸದ್ಯಕ್ಕೆ ರವೀನ ಕರಿರಿ’.

‘ಯೆಸ್ ಸಾರ್’.

ಎದುರು ಬಂದು ನಿಂತ ರವಿ ಯಾವ ಭಂಗಿಯಲ್ಲಿ ನಿಲ್ಲಬೇಕೆಂಬ ಗೊಂದಲಕ್ಕೆ ಬಿದ್ದಂತೆ ಚಡಪಡಿಸುತ್ತಿದ್ದ.

‘ರವಿ, ಗಾಡೀಲಿ ಬರಿ ತರಕಾರಿ ಇದೆ, ಮಡಿಕೇರಿಯಿಂದ ಸೊಪ್ಪು ತಂದು ಮಾರ್ಕೆಟ್ಟಿಗೆ ಹಾಕೊದಿಲ್ವ…’

‘…’

ರವಿಯ ಬಾಯಿಂದ ಮಾತು ಹೊರಡದಾಗಿತ್ತು.

‘ವಿನಯ್, ನೀವು ಬಾದಾಮಿ ಮಾವಿನ ಹಣ್ಣು, ವಿದೇಶಿ ಸೇಬು… ಇದಕ್ಕೆಲ್ಲಾ ಒಂದು ಎಂಟಾಣೆ ಅಗಲ ಸ್ಟಿಕ್ಕರ್ ಲೇಬಲ್ ಹಾಕಿರ್ತಾರೆ ಗಮನಿಸಿದ್ದೀರ?’

‘ನೋಡಿದ್ದೀನಿ ಸಾರ್’.

ಠಾಣೆಯ ಎಲ್ಲ ಪೇದೆಗಳು ಸುತ್ತಲೂ ನಿಂತರು, ಇಲ್ಲಿ ಏನೋ ಸ್ವಾರಸ್ಯ ಇದೆ ಅಂತ.

‘ನಮ್ಮ ರವಿ ಸಾಹೇಬರು ಬೂದುಗುಂಬಳಕ್ಕೆಲ್ಲಾ ಸ್ಟಿಕ್ಕರ್ ಹಾಕಿದ್ದಾರೆ… ಬೆಳಿಗ್ಗೆ ರೈತರ ಸಂತೆ ಅಂಗಳದಲ್ಲಿ, ಇವನ ಜೀಪ್ ಒಳಗೆ ಇಣುಕಿದಾಗ ಈ ಆಶ್ಚರ್ಯ ಕಂಡೆ… ಅದು ಏನು, ಒಂದು ಪಾನಿಪುರಿ ಅಷ್ಟಗಲದ ಸ್ಟಿಕ್ಕರ್ರೂ… ಎಲ್ಲಾ ಬೂದುಗುಂಬಳಗಳ ಮೇಲೂ… ಜೀಪಲ್ಲಿ ಒಂದೈವತ್ತಾದರು ಇತ್ತೇನೊ… ಅಲ್ವಾ ರವಿ?’

ರವಿ ಸುಮ್ಮನೆ ತಲೆ ಕೆಳಗೆ ಹಾಕಿ ನಿಂತಿದ್ದ.

‘ಭುಜಂಗ, ಹೋಗಿ ಒಂದು ತನ್ನಿ ಆ ಜೀಪಿಂದ’.

ಭುಜಂಗ ತಂದ ಬೂದುಗುಂಬಳ ನೆಲದ ಮೇಲಿರಿಸಿ, ‘ಈ ರವಿ ಸಾಮಾನ್ಯದವನಲ್ಲ ವಿನಯ್… ಪಿನ್ ಹೋಲ್ ಸರ್ಜನ್’.

ಮಾಯಣ್ಣ ಏನು ಹೇಳಲು ಹೊರಟಿದ್ದಾನೆ ಅನ್ನುವುದರ ಸ್ಪಷ್ಟತೆ ಇನ್ನೂ ಸಿಕ್ಕಿರಲಿಲ್ಲ.

‘ವಿನಯ್, ಆ ಸ್ಟಿಕ್ಕರ್ ಇದೆಯಲ್ಲ ಅದನ್ನು ಬೆರಳಲ್ಲಿ ಒತ್ತಿ…’

ವಿನಯ್ ಹಾಗೆ ಮಾಡಲು ಅಷ್ಟು ಭಾಗ ಸರಾಗವಾಗಿ ಒಳಗೆ ಹೋಯಿತು.

‘ನೋಡುದ್ರಾ ಪಿನ್ ಹೋಲ್‌ನ… ಓಕೆ, ಈಗ ಪೂರ್ತಿ ಕತ್ತರಿಸಿ ನೋಡೋಣ’.

ಭುಜಂಗ ಒಂದು ಕತ್ತಿಯಿಂದ ಕುಂಬಳವನ್ನು ಸರಿಯಾಗಿ ಮಧ್ಯಕ್ಕೆ ಎರಡು ಭಾಗವಾಗಿ ಕತ್ತರಿಸಲು ಒಳಗೆ ಒಣಗಿಸಿ, ಹುಡಿಗಟ್ಟಿ, ಪ್ಲಾಸ್ಟಿಕ್ ಕವರಲ್ಲಿ ಒತ್ತಾಗಿ ತುಂಬಿ ಕಟ್ಟಿದ, ಸುಮಾರು ಒಂದು ಕೇಜಿಯಷ್ಟು ಗಾಂಜಾ ಸೊಪ್ಪು.

‘ನೋಡುದ್ರಾ ಭುಜಂಗ, ಕೊಡಗಿನ ಈ ಗಾಂಜಾ ಪ್ಲಾಂಟರ್… ಬೂದುಗುಂಬಳದಲ್ಲಿ ಒಂದು ತೂತು ಮಾಡಿ ಅದರ ಮೂಲಕ ಒಂದು ಪ್ಲಾಸ್ಟಿಕ್ ಕವರ್ ಒಳಗೆ ಸೇರಿಸಿ, ಅದರ ಬಾಯಿಯ ಮೂಲಕ ಈ ಒಣ ಗಾಂಜಾ ಹುಡಿಯನ್ನು ಒತ್ತಾಗಿ ತುಂಬಿ ಮತ್ತೆ ಕವರ್ ಬಾಯಿ ಬಿಗಿದು, ಅದನ್ನು ಒಳಗೆ ತುರುಕಿ, ಕೊರೆದ ಕುಂಬಳದ ತುಂಡನ್ನು ಅದೇ ಜಾಗದಲ್ಲಿ ಸೇರಿಸಿ, ಮೇಲೆ ಈ ಸ್ಟಿಕ್ಕರ್ ಅಂಟಿಸಿ ಬಿಟ್ಟರೆ ಆಯಿತು, ಯಾರಿಗೂ ಸಂಶಯ ಬರದ ಹಾಗೆ ಸಲೀಸಾಗಿ ಸಾಗಿಸಬಹುದು… ನೋಡಿ ಇವರ ತಂತ್ರ. ಅಮ್ಮು ಅವರ ಎಸ್ಟೇಟಿನ ಹಿಂದಕ್ಕಿರುವ ದಟ್ಟಕಾಡಿನ ಒಂದಷ್ಟು ಭಾಗ ಸವರಿ, ಗಾಂಜಾ ಬೆಳೆಯುವ ಈ ಪ್ರಗತಿಪರ ರೈತರು, ಈ ರೀತಿ ತಮ್ಮ ಫಸಲನ್ನು ಬೆಂಗಳೂರಿಗೆ ತಂದು, ಸಗಟಾಗಿ ಆ ರೈತರ ಸಂತೆಯಲ್ಲಿರುವ, ಮೂಲೆ ಮಳಿಗೆಯ ಖದೀಮನಂಥವರಿಗೆ ಮಾರ್ತಾರೆ, ಅವನು ಇದನ್ನ ಚಿಕ್ಕ ಚಿಕ್ಕ ಸಾಚೆಟ್ಸಲ್ಲಿ ತುಂಬಿ ಡಬಲ್ ಬೀನ್ಸ್‌ನಲ್ಲಿಟ್ಟು, ಗಮ್ ಹಾಕಿ ಅಂಟಿಸಿ, ತನ್ನಲ್ಲಿ ಬರುವ ವಾಡಿಕೆ ಗಾಂಜಾ ಚಟದಾಸರಿಗೆ ಚಿಲ್ಲರೆಯಾಗಿ ಮಾರ್ತಾನೆ. ಇದು ಇವರು ಮಾಡುವ ತರಕಾರಿ ವ್ಯಾಪಾರ. ಇದರ ಸುಳಿವು ನನಗೆ ಆಗಲೇ ಸಿಕ್ಕಿದೆ ಎಂದು ತಿಳಿದ ರವಿ, ಆಗ ನಾನು ವೆಜಿಟಬಲ್ ಬಾತ್‌ಗೆ ಯಾವ ತರಕಾರಿ ಹೆಚ್ಚು ರುಚಿ ಎಂದು ಕೇಳಿದಾಗ ಡಬ್ಬಲ್ ಬೀನ್ಸ್ ಅಂತ ಹೇಳಿದ್ದು ಇದಕ್ಕೆ’.

‘ಸಾರ್, ಇವನ ಈ ಗಾಂಜಾ ಸೊಪ್ಪಿನ ಬೇಸಾಯ ನಿಮಗೆ ಹೇಗೆ ತಿಳೀತು ಸಾರ್’.

‘ಗಣಪತಿ… ಮನುಷ್ಯ ಆಗಲೇ ಹೊರಟು ನಿಂತಿದ್ದಾನೆ. ಅದಕ್ಕೆ ಮುಂಚೆ ಒಂದಷ್ಟು ಹೊರೆ ಇಳಿಸಿ ಹಗುರವಾಗಿ ಹೋಗೊ ತರಾತುರಿಯಲ್ಲಿದ್ದಾನೆ. ಅಷ್ಟೇ ಅಲ್ಲ, ಹೋದ ತಿಂಗಳು, ಇವನ ಈ ಸೀಕ್ರೆಟ್ ಕ್ಯಾಶ್ ಕ್ರಾಪ್ ಪ್ಲಾಂಟೇಷನ್‌ನ ಘಾಟು, ಭೀರಪ್ಪನ ಮೂಲಕ ಅಮ್ಮು ಮೂಗಿಗೆ ಬಡಿದಿದೆ. ಅಮ್ಮು ಸೀದಾ ಇವನಿಗೆ ವಾರ್ನಿಂಗ್ ಕೊಟ್ಟಿದ್ದಾರೆ. ತಕ್ಷಣ ಇದು ನಿಲ್ಲಬೇಕು, ನಾನು ಮತ್ತೆ ಬಂದಾಗ ಇದು ಇನ್ನೂ ಮುಂದುವರಿದದ್ದೇ ಆದರೆ ಪೊಲೀಸು ಕಂಪ್ಲೇಂಟ್ ಕೊಡುವುದಾಗಿ… ಇವನು ಕಂಗಾಲಾಗಿದ್ದಾನೆ. ಲಕ್ಷ ಲಕ್ಷ ಆದಾಯದ ಈ ಕಲ್ಪವೃಕ್ಷದ ಬುಡಕ್ಕೆ ಕೊಡಲಿ ಹಿಡಿದು ನಿಂತಿದ್ದಾಳಲ್ಲ ಈ ಅಮ್ಮೂ ಅಂತ’.

‘ಸಾರ್ ಇವನು ಪಕ್ಕಾ 420. ಬರಕೊಡ್ತೀನಿ, ಅಮ್ಮು ಅವರ ಕೊಲೆ ಇವನೇ ಮಾಡಿರ್ತಾನೆ ಸಾರ್’.

‘ನೀವು ಬರೆದುಕೊಟ್ಟರೆ ಜಡ್ಜ್ ಒಪ್ಪಲ್ಲ ವಿನಯ್. ಈಗ ಸದ್ಯಕ್ಕೆ ಆ ರೈತರ ಸಂತೆಯ ಮೂಲೆ ಮಳಿಗೆ ಚಿಲ್ಲರೆ ವ್ಯಾಪಾರಿ ಇದ್ದಾನಲ್ಲ ಅವನು ಅಲರ್ಟ್ ಆಗೋದಕ್ಕೆ ಮುಂಚೆ ಹೋಗಿ ಮಾಲ್ ಸಮೇತ ಎತ್ತಾಕ್ಕೊಂಡ್ ಬನ್ನಿ. ಹಾಗೆ ಇನ್ನೂ ಯಾರ್‍ಯಾರು ರೀಟೇಲ್ ಡೀಲರ್ಸ್ ಇದ್ದಾರೊ, ಇವರ ಹತ್ತಿರ ಬಾಯಿ ಬಿಡಿಸಿ, ಅವರನ್ನು ಒದ್ದು ಕರಕೊಂಡು ಬನ್ನಿ’.

‘ಯೆಸ್ ಸಾರ್’.

‘ನೀವು, ಜವರಯ್ಯ, ಭುಜಂಗ, ಕಾಟಯ್ಯ